ಮಿಶ್ರ ಮಾಡಿದರೆ ಹಳದಿ ರಂಗು ಬರುತ್ತದೆ. ಕೆಲವರು ಅಲ್ಪ ಪ್ರಮಾಣದಲ್ಲಿ ಬೆಳ್ಳಿ ಬಳಸುವುದೂ ಇದೆ.

ಈ ಹಳೆಯ ಮಾದರಿ ಆಭರಣಗಳ ಇನ್ನೊಂದು ವಿಶೇಷವೆಂದರೆ ಇವುಗಳಿಗೆ ಹೆಚ್ಚು ಹೊಳಪು ಇರುವುದಿಲ್ಲ. ಅಂದರೆ ಪಾಲಿಷ್ ಹಾಕುವುದು ಕಡಿಮೆ. ಇದರಿಂದಾಗಿಯೇ ಅದಕ್ಕೆ ಆ್ಯಂಟಿಕ್ ಶೋಭೆ ಬರುವುದು.

## ಪ್ರಕೃತಿಯೇ ವಿನ್ಯಾಸಕ್ಕೆ ಪ್ರೇರಣೆ

70–80 ವರ್ಷಗಳ ಹಿಂದಿನ ಆಭರಣಗಳು, ನಮ್ಮ ಅಜ್ಜಿಯಂದಿರು ಧರಿಸುತ್ತಿದ್ದ ಒಡವೆಗಳೇನಾದರೂ ಇದ್ದರೆ ಒಂದು ವಿಶೇಷವನ್ನು ಗಮನಿಸಬಹುದು. ಹಾರಗಳಲ್ಲಿರುವ ಗುಂಡುಗಳನ್ನು ವಿನ್ಯಾಸ ಮಾಡುವಾಗ ಹೆಚ್ಚಾಗಿ ಧಾನ್ಯ, ಕಾಳುಗಳ ಮಾದರಿಯನ್ನು ಅಂದಿನ ಅಕ್ಕಸಾಲಿಗರು ಅನುಸರಿಸುತ್ತಿದ್ದರು. ಜೋಳ, ಗೋಧಿಯ ವಿನ್ಯಾಸ, ಅವಲಕ್ಕಿಯ ವಿನ್ಯಾಸ, ನೆಲ್ಲಿಕಾಯಿ, ಮೆಣಸಿನ ಕಾಳು, ಕಾಫಿ ಬೀಜ, ಕೊತ್ತಂಬರಿ.. ಹೀಗೆ ಪ್ರಕೃತಿಯಲ್ಲಿ ಇರುವ ವಸ್ತುಗಳ ವಿನ್ಯಾಸವನ್ನೇ ನಕಲು ಮಾಡುತ್ತಿದ್ದರು. ಇದು ಅಂದವಾಗಿಯೂ ಕಾಣುತ್ತಿತ್ತು. ಉತ್ತರ ಕನ್ನಡ, ಉತ್ತರ ಕರ್ನಾಟಕ, ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಚಾಲ್ತಿಯಲ್ಲಿರುವ ಬೋರ್‌ಮಾಲಾ ಇದಕ್ಕೊಂದು ಉದಾಹರಣೆ. ಗುಂಡಿನ ಮೇಲೆ ಜೋಳದ ಕಾಳಿನ ಕೆತ್ತನೆಯೂ ಜನಪ್ರಿಯ. ನೆಲ್ಲಿಕಾಯಿಯ ಮೇಲಿರುವ ಗೆರೆಯನ್ನು ಚಿನ್ನದ ಗುಂಡುಗಳ ಮೇಲೆ ಕೆತ್ತಿರುವಂತಹ ವಿನ್ಯಾಸ ಈಗಿನ ಆ್ಯಂಟಿಕ್ ಹಾರಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಈ ಗುಂಡುಗಳನ್ನು ಚಿನ್ನದ ದಾರದಲ್ಲಿ ಪೋಣಿಸುವುದು ಮಾತ್ರವಲ್ಲದೇ ಕಪ್ಪು ದಾರದಲ್ಲಿ ಗಂಟು ಹಾಕಿ ದೇಸಿ ಮಾದರಿಯಲ್ಲಿ ಪೋಣಿಸುವ ಸಂಪ್ರದಾಯವೂ ಇದೆ. ಕೊಡಗಿನ ಜೋಮಾಲೆ ಇದಕ್ಕೊಂದು ಉದಾಹರಣೆ. ಮಧ್ಯೆ ಮಧ್ಯೆ ಕೆಂಪು, ಹಸಿರು ಬಣ್ಣದ ಓನಿಕ್ಸ್ ಹರಳುಗಳನ್ನು ಕೂರಿಸುವ ಚಿನ್ನದ ಗುಂಡುಗಳನ್ನು ಸೇರಿಸಲಾಗುವುದು. ಇವುಗಳು ಕೆಲವೊಮ್ಮೆ ಗುಂಡಾಗಿರದೆ, ಅಷ್ಟ ಪಟ್ಟಿ ಹೊಂದಿರುವ ಕುಂದನ್ ಕಲೆಯಿರುವ ಜಡಾವ್ ಮಣಿಗಳಾಗಿರುತ್ತವೆ.







ಕುಸುರಿ ಕೆಲಸ ಮಾಡಿದ ಗೇರು ಗುಂಡುಗಳು ಕೂಡಾ ಈಗ ಜನಪ್ರಿಯ. ಈ ವಿನ್ಯಾಸದಲ್ಲಿ ಜಾಲಂಧ್ರದ ತರಹ ರಚನೆಯೂ ಕಂಡು ಬರುತ್ತದೆ. ಆಕಾರವೂ ಅಷ್ಟೆ, ಗುಂಡನೆಯ ಆಕಾರವಲ್ಲದೇ, ಉದ್ದನೆಯ ಕೊಳವೆಯ ಆಕಾರದಲ್ಲೂ ಇರುತ್ತವೆ. ಹಾಗೆಯೇ ನಕಾಸಿ ಕುಸುರಿ ಕೆಲಸ ಮಾಡಿದ ನಕಾಸಿ ಗುಂಡುಗಳೂ ಲಭ್ಯ.

ಈ ಗುಂಡುಗಳ ಒಳಗೆ ಸಾಮಾನ್ಯವಾಗಿ ಪೊಳ್ಳಿರುತ್ತದೆ. ಹೀಗಾಗಿ ಇವು ಅಷ್ಟು ಭಾರ ಇರುವುದಿಲ್ಲ. ಕೆಲವೊಮ್ಮೆ ಗುಂಡುಗಳ ಒಳಗೆ ಅರಗನ್ನು ತುಂಬಿಸಿರುತ್ತಾರೆ.

ಗುಂಡುಗಳನ್ನು ಪೋಣಿಸಿದ ಸರದ ಎಳೆಯ ಮಧ್ಯೆ ಅಗಲವಾದ ಪದಕ ಅಂದವಾಗಿ ಕಾಣುತ್ತದೆ. ಈ ಪದಕ ಕೂಡಾ ಪ್ರಕೃತಿಯಲ್ಲಿ ಅರಳುವ ಹೂವಿನ ವಿನ್ಯಾಸ ಹೊಂದಿರುವುದು ಸಾಮಾನ್ಯ. ಕಮಲ, ಗುಲಾಬಿ, ಸೇವಂತಿಗೆ ವಿನ್ಯಾಸವಲ್ಲದೇ ಗಣಪತಿ, ಕೂತಿರುವ ಲಕ್ಷ್ಮಿಯ ವಿನ್ಯಾಸ ಈಗ ಜನಪ್ರಿಯವಾಗಿದೆ. ಪದಕದ ಮೇಲೆ, ಅಂಚಿಗೆ ಮಾಣಿಕ್ಯ, ಪಚ್ಚೆಯ ಪುಟ್ಟ ಮಣಿಗಳನ್ನು, ಮುತ್ತನ್ನೂ ಸೇರಿಸುವುದು ವಾಡಿಕೆ. ಈ ಪದಕಗಳು ಭಾರವಾಗಿದ್ದು, ಬೇರೆ ಸರಗಳಿಗೂ ಬಳಸಬಹುದು. ಅಂದರೆ ಪದಕಗಳ ಹಿಂದೆ ಕೊಕ್ಕೆಯ ತರಹ ವಿನ್ಯಾಸ ಮಾಡಿರುತ್ತಾರೆ. ಇದನ್ನು ಬೇಕಿದ್ದರೆ ಹಾರಕ್ಕೆ ಹಾಕಿ ಬೆಸುಗೆ ಮಾಡಿಸಬಹುದು ಅಥವಾ ನೂಲಿನಿಂದ ಕಟ್ಟಿಸಬಹುದು.

ಇಂತಹ ಹಾರಗಳನ್ನು ಕತ್ತಿಗೆ ಹತ್ತಿರವಾಗಿ ಕೂರುವಂತಹ ನೆಕ್ಲೇಸ್‌ನಂತೆಯೂ ವಿನ್ಯಾಸ ಮಾಡಲಾಗುತ್ತದೆ. ಉದ್ದನೆಯ ಹಾರವಾಗಿಯೂ ಧರಿಸಬಹುದು. ಮದುಮಗಳಿಗೆ ಆಡಂಬರವಾಗಿ ಕಾಣುವ ಈ ಆ್ಯಂಟಿಕ್ ಹಾರಗಳನ್ನು ಸೀರೆ ಅಥವಾ ಲೆಹಂಗಾ ಜೊತೆಯೂ ಧರಿಸಬಹುದು.

## ಬೆಲೆ ಅಧಿಕ

ಬೇರೆ ಚಿನ್ನದ ಒಡವೆಗಳಿಗೆ ಹೋಲಿಸಿದರೆ ಈ ಆ್ಯಂಟಿಕ್ ಆಭರಣಗಳ ಬೆಲೆ ಸಾಮಾನ್ಯವಾಗಿ ಅಧಿಕ. ಗ್ರಾಮಿಗೆ 150– 200 ರೂಪಾಯಿ ಹೆಚ್ಚೇ ಇರುತ್ತದೆ. ಇದಕ್ಕೆ ಕಾರಣ ಕುಶಲಕರ್ಮಿಗಳಿಗೆ ಇದನ್ನು ತಯಾರಿಸಲು ತಿಂಗಳುಗಟ್ಟಲೆ ಬೇಕು ಎನ್ನುವುದು ವಿನ್ಯಾಸಗಾರರ ಅಂಬೋಣ. ಯಾವುದೆ ಬಗೆಯ ಮಷಿನ್ ಕಟ್ ಅನ್ನು ಇದರಲ್ಲಿ ಕಾಣುವುದು ಸಾಧ್ಯವಿಲ್ಲ. ಕೈಗಳಿಂದಲೇ ತಯಾರಿಸಬೇಕಾಗುತ್ತದೆ. ಜೊತೆಗೆ ವಜ್ರ, ಮಾಣಿಕ್ಯ, ಪಚ್ಚೆಯಂತಹ ಅಮೂಲ್ಯ ಹರಳುಗಳನ್ನು ಈ ಆಭರಣಗಳಲ್ಲಿ ಕೂರಿಸಲಾಗುವುದು. ಇದೂ ಕೂಡಾ ಬೆಲೆ ಹೆಚ್ಚಳವಾಗಲು ಇನ್ನೊಂದು ಕಾರಣ.

ಈ ಒಡವೆಗಳನ್ನು ತುಂಬಾ ಕಾಳಜಿಯಿಂದ ಕಾದಿಡಬೇಕಾಗುತ್ತದೆ. ಯಾವುದೇ ರಾಸಾಯನಿಕ, ಸೋಪು, ಸುಗಂಧದ್ರವ್ಯ ತಾಗದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹರಳು, ಕುಂದನ್, ಎನಾಮಲ್ ಹೊಳಪು ಕಳೆಗುಂದುತ್ತದೆ. ಉಗುರು ಬೆಚ್ಚಗಿನ ನೀರಿನಲ್ಲಿ ಅಂಟುವಾಳಕಾಯಿ ಪುಡಿ ಬೆರಸಿ ಆಭರಣ ಶುಚಿ ಮಾಡಬಹುದು. ಮೆತ್ತನೆಯ ಟೂತ್‌ಬ್ರಷ್ ಬಳಸಬಹುದು. ಇತರ ಆಭರಣಗಳ ಜೊತೆ ಇಡದೆ, ಪ್ರತ್ಯೇಕ ಪೆಟ್ಟಿಗೆಯಲ್ಲಿ ಹಾಕಿಟ್ಟರೆ ಹರಳಿಗೆ ಗೀರು ಬೀಳುವುದನ್ನು ತಪ್ಪಿಸಬಹುದು. ■